ಅ) ಹೌದು.

ಆ) ಈ ವಿಷಯವು ಪರಿಗಣನೆಯಲ್ಲಿದೆ.

ಖಾಸಗೀ ಪ್ರೌಢಶಾಲೆಗಳಲ್ಲಿರುವ ನೌಕರರ ಸಂಖ್ಯೆ

286 (1027) ಕರಿಯಣ್ಣ (ಹೊಳೇ ಹೊನ್ನೂರು):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ಪ್ರೌಢಶಾಲೆಗಳೆಷ್ಟು, ಅವುಗಳಲ್ಲಿರುವ ನೌಕರರೆಷ್ಟು;

ಆ) ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರೆಷ್ಟು;

ಇ) ಸರ್ಕಾರದ ಮೀಸಲಾತಿಯ ನಿಯಮಗಳನ್ನು ಪಾಲಿಸದ ಖಾಸಗಿ ಪ್ರೌಢಶಾಲೆಗಳಕ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) ಅನುದಾನಸಹಿತ ಶಾಲೆಗಳು	2097
ಅನುದಾನರಹಿತ ಶಾಲೆಗಳು	930
1992–93ನೇ ಸಾಲಿನಲ್ಲಿ ಇದುವರೆಗೂ ಶಾಶ್ವತ ಅನುದಾನರಹಿತವಾಗಿ ಮಂಜೂರಾಗಿರುವ ಶಾಲೆಗಳ ಸಂಖ್ಯೆ	818
ಒಟ್ಟು	3845

ಒಟ್ಟು 26,066 ಸಿಬ್ಬಂದಿ ವರ್ಗದವರಿದ್ದಾರೆ.

ಆ)	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಅನುದಾನಸಹಿತ ಶಾಲೆಗಳಲ್ಲಿ		854 164
ಅನುದಾನರಹಿತ ಶಾಲೆಗಳಲ್ಲಿ	329	44
	1183	208

ಇ) ಅನುದಾನ ಸಂಹಿತೆಯ ನಿಯಮಗಳ ಪ್ರಕಾರ ಪ್ರತಿ ಪ್ರಕರಣದ ಅರ್ಹತೆಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ರಾಜ್ಯದಲ್ಲಿ ಸಾಕ್ಷರತೆಯ ಯೋಜನೆಯ ಪ್ರಗತಿ

287 (1053) ಶ್ರೀ ಎಚ್.ಎಂ. ರೇವಣ್ಣ (ಮಾಗಡಿ):-

ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಾಕ್ಷರತೆ ಯೋಜನೆ ಯಾವ ಹಂತದಲ್ಲಿದೆ ?

ಆ) ಸಾಕ್ಷರತೆ ಯೋಜನೆಯಲ್ಲಿ ಸಂಪೂರ್ಣ ಸಾಕ್ಷರತೆಯೆಂದು ಘೋಷಿಸಲಾದ ಜಿಲ್ಲೆಗಳೆಷ್ಟು ?

ಇ) ರಾಜ್ಯವನ್ನು ಸಂಪೂರ್ಣ ಸಾಕ್ಷರತೆಯನ್ನಾಗಿ ಯಾವಾಗ ಘೋಷಿಸಲಾಗುವುದು ?

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಸಚಿವರು):–

ಅ) ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತಾ ಅಂದೋಲನವು ವಿವಿಧ ಹಂತಗಳಲ್ಲಿ ಅನುಷ್ಠಾನದಲ್ಲಿದೆ. ಪ್ರಸ್ತುತ 9 ಜಿಲ್ಲೆಗಳಲ್ಲಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

ಆ) ಒಂದು (ದಕ್ಷಿಣ ಕನ್ನಡ)

ಇ) ಸಂಪೂರ್ಣ ಸಾಕ್ಷರತಾ ಅಂದೋಲನದ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮುಂದಿನ 2 ವರ್ಷಗಳೊಳಗಾಗಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ನಿಗಧಿತ ಸೂತ್ರದಂತೆ ಜಿಲ್ಲೆಯನ್ನು ಸಂಪೂರ್ಣ ಸಾಕ್ಷರ ಜಿಲ್ಲೆಯೆಂದು ಘೋಷಿಸುವ ಮೊದಲು ಆ ಜಿಲ್ಲೆಯಲ್ಲಿನ ಅನಕ್ಷರಸ್ಥರ ಪೈಕಿ ಶೇಕಡ 80–85 ರಷ್ಟು ಜನರಾದರೂ ಅಕ್ಷರಸ್ಥರಾಗಬೇಕು. ಜಿಲ್ಲೆಗಳು ಈ ಹಂತದ ಸಾಕ್ಷರತೆಯನ್ನು ಸಾಧಿಸಿದ ನಂತರ ಸಂಪೂರ್ಣ ಸಾಕ್ಷರತೆ ಹೊಂದಿರುವುದಾಗಿ ಘೋಷಿಸಲಾಗುವುದು.

ರಾಜ್ಯದಲ್ಲಿ ಆರೋಗ್ಯ ವಿಶ್ವವಿದ್ಯಾಲಯ ಪ್ರಾರಂಭ

288 (1054) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):-

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆರೋಗ್ಯ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವ ಉದ್ದೇಶವು ಸರ್ಕಾರಕ್ಕಿದೆಯೇ ?

ಆ) ಹಾಗಿದ್ದಲ್ಲಿ ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದು ?

ಇ) ಯಾವ ಜಿಲ್ಲೆಯಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು

ಆ) ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಇ) ಡಾ।। ಹೆಚ್. ನರಸಿಂಹಯ್ಯ ಸಮಿತಿಯ ಭಾಗ – 2 ರಲ್ಲಿ ಸಲ್ಲಿಸಿರುವ ವರದಿಯಂತೆ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸಲಹೆ ನೀಡಿದ್ದು, ಸದರಿ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ.

ಖಾಸಗಿ ಗ್ರಂಥಪಾಲಕರಿಗೂ ಸರ್ಕಾರಿ ಗ್ರಂಥಪಾಲಕರಿಗೂ ವೇತನ ತಾರತಮ್ಯ

290 (906) ಹೆಚ್.ಎಂ. ರೇವಣ್ಣ (ಮಾಗಡಿ):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿ ಅಂಗೀಕೃತ ಪ್ರೌಢಶಾಲಾ ಗ್ರಂಥಪಾಲಕರಿಗೂ ಕಿರಿಯ ಕಾಲೇಜು ಮತ್ತು ಸರ್ಕಾರಿ ಗ್ರಂಥಪಾಲಕರಿಗೂ ವೇತನ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ವೇತನ ತಾರತಮ್ಯವನ್ನು ಸರಿಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ ಕ್ರಮ ಕೈಗೊಳ್ಳುವುದು ಯಾವಾಗ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–